**0101/0423**

**I Semester of 3 Year LL.B./ IV Semester of 5 Years B.A. LL.B./B.B.A. LL.B. Examination, June/July 2014**

**CONTRACT – I**

Duration : 3 Hours | Max. Marks : 100

**Instructions** : 1. Answer all **5** Questions.
2. Figures to the **right** indicate marks
3. Answers should be written either in **English** or **Kannada** completely.

**UNIT – I**

Q. No. 1. (a) Define consideration. State the exceptions to the rule that the promise without consideration is void. Marks : 15

ಪ್ರತಿಫಲವನ್ನು ವ್ಯಾಖ್ಯಾನಿಸಿರಿ. ''ಪ್ರತಿಫಲವಿಲ್ಲದ ವಾಗ್ದಾನ ಶೂನ್ಯ'' ಎಂಬ ನಿಯಮಕ್ಕೆ ಇರುವ ಅಪವಾದಗಳನ್ನು ತಿಳಿಸಿ.

OR/**ಅಥವಾ**

State the doctrine of privity of contract. Explain the exceptions to the doctrine.

ಒಡಂಬಡಿಕೆಯಲ್ಲಿ ಭಾಗಿ ಸಿದ್ಧಾಂತವನ್ನು ತಿಳಿಸಿರಿ. ಈ ಸಿದ್ಧಾಂತಕ್ಕೆ ಇರುವ ಅಪವಾದಗಳನ್ನು ವಿವರಿಸಿರಿ.

(b) Solve the problem. Give reasons to your answer. Marks : 5

ಸಮಸ್ಯೆ ಬಿಡಿಸಿರಿ. ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿರಿ.

Gopal's son was missing. He ordered his servant Ranganna to search that boy. Ranganna went to different places to search the boy. Subsequently, Gopal declared the reward of Rs. 10,000/- to any one who finds the missing boy. Ranganna is not aware of this reward. However, he finds and returns the boy to Gopal. Can Ranganna claim this reward ?

ಗೋಪಾಲನ ಮಗನು ತಪ್ಪಿಸಿಕೊಂಡಿರುವನು. ಅವನು ತನ್ನ ಸೇವಕನಾದ ರಂಗಣ್ಣನಿಗೆ ಆ ಹುಡುಗನನ್ನು ಹುಡುಕಲು ಆದೇಶಿಸಿದನು. ರಂಗಣ್ಣನು ಕಳೆದುಹೋದ ಆ ಮಗುವನ್ನು ಹುಡುಕಲು ಬೇರೆ ಬೇರೆ ಸ್ಥಳಕ್ಕೆ ಹೋದನು. ತದನಂತರ, ಗೋಪಾಲನು ಆ ಮಗುವನ್ನು ಹುಡುಕಿಕೊಟ್ಟವರಿಗೆ ರೂಪಾಯಿ 10,000/– ಬಹುಮಾನ ಘೋಷಿಸಿದನು. ರಂಗಣ್ಣನಿಗೆ ಆ ಬಹುಮಾನದ ಬಗ್ಗೆ ಗೊತ್ತಿಲ್ಲ. ಆದಾಗ್ಯೂ, ಆ ಮಗುವನ್ನು ಹುಡುಕಿ ಗೋಪಾಲನಿಗೆ ಮರಳಿಸುತ್ತಾನೆ. ರಂಗಣ್ಣನು ಆ ಬಹುಮಾನವನ್ನು ಕೇಳಬಹುದೇ ?

OR/**ಅಥವಾ**

‘A’ posts his proposal to sell his computer system to ‘B’ on 20-12-2009. ‘B’ receives this proposal on 23-12-2009 and on the same day ‘B’ posts his letter of acceptance. Thereafter ‘B’ sends telegram revoking his acceptance on 24-12-2009. ‘A’ receives B’ s acceptance letter on 24-12-2009 and telegram on 25-12-2009. Is there a contract between A and B ?

‘ಅ’ನು ತನ್ನ ಗಣಕಯಂತ್ರವನ್ನು ಮಾರುವ ಪ್ರಸ್ತಾವನೆಯನ್ನು ‘ಬ’ನಿಗೆ ದಿನಾಂಕ 20-12-2009 ರಂದು ಅಂಚೆಪೆಟ್ಟಿಗೆಗೆ ಹಾಕುತ್ತಾನೆ. ‘ಬ’ನಿಗೆ ಈ ಪ್ರಸ್ತಾವನೆ ದಿನಾಂಕ 23-12-2009 ರಂದು ತಲುಪುತ್ತದೆ ಮತ್ತು ಅದೇ ದಿನ ‘ಬ’ನು ತನ್ನ ಸ್ವೀಕೃತಿ ಪತ್ರವನ್ನು ಅಂಚೆಪೆಟ್ಟಿಗೆ ಗೆ ಹಾಕುತ್ತಾನೆ. ತದನಂತರ ‘ಬ’ನು ತನ್ನ ಸ್ವೀಕೃತಿಯನ್ನು ಹಿಂಪಡೆಯುವ ಉದ್ದೇಶದಿಂದ ದಿನಾಂಕ 24-12-2009 ರಂದು ತಂತಿ ಸಂದೇಶವನ್ನು ಕಳುಹಿಸುತ್ತಾನೆ. ‘ಅ’ನು ‘ಬ’ನ ಸ್ವೀಕೃತಿ ಪತ್ರವನ್ನು 24-12-2009 ರಂದು ಪಡೆಯುತ್ತಾನೆ ಮತ್ತು ತಂತಿ ಸಂದೇಶವನ್ನು 25-12-2009 ಕ್ಕೆ ಪಡೆಯುತ್ತಾನೆ. ಇಲ್ಲಿ ಒಡಂಬಡಿಕೆಯಾಗಿದೆಯೇ ?

## UNIT – II

Q. No. 2. (a) Define ‘Consent’. Explain the circumstances under which consent is said to be free. Marks : 15

ಸಮ್ಮತಿಯನ್ನು ವ್ಯಾಖ್ಯಾನಿಸಿ. ಸಮ್ಮತಿಯು ಯಾವಾಗ ಮುಕ್ತ ಸಮ್ಮತಿಯಾಗುತ್ತದೆ ಎಂಬುದನ್ನು ವಿವರಿಸಿರಿ.

OR/**ಅಥವಾ**

Explain different types of agreements which are <u>Void Ab initio.</u>

ಆರಂಭದಿಂದಲೇ ಶೂನ್ಯವಾದ ವಿವಿಧ ಬಗೆಯ ಒಪ್ಪಂದಗಳನ್ನು ವಿವರಿಸಿರಿ.

(b) Write short note : Marks : 5

ಲಘು ಟಿಪ್ಪಣಿ ಬರೆಯಿರಿ :

i) Contingent Contract.

ಸಂಭವನೀಯ ಒಡಂಬಡಿಕೆ.

OR/**ಅಥವಾ**

ii) Agreement by way of wager

ಪಂದ್ಯದ (ಜೂಜಾಟ) ರೀತಿಯ ಒಡಂಬಡಿಕೆ.

## UNIT – III

Q. No. 3. (a) What is frustration of contract ? State specific grounds of frustration. Marks : 15

ಒಡಂಬಡಿಕೆಯ ನಿಷ್ಫಲ ಸಿದ್ಧಾಂತವೆಂದರೇನು ? ನಿಷ್ಫಲ ಸಿದ್ಧಾಂತದ ವಿವಿಧ ಆಧಾರಗಳನ್ನು ಹೇಳಿರಿ.

OR/**ಅಥವಾ**

State the effects of anticipatory breach of contract.

ಒಡಂಬಡಿಕೆಯ ನಿರೀಕ್ಷಣಾ (ಅವಧಿಗೆ ಮೊದಲೇ) ಉಲ್ಲಂಘನೆಯ ಪರಿಣಾಮಗಳನ್ನು ಹೇಳಿರಿ.

(b) Solve the following problem. Give reasons to your answer. Marks : 5

ಈ ಕೆಳಗಿನ ಸಮಸ್ಯೆ ಬಿಡಿಸಿ. ಉತ್ತರಕ್ಕೆ ಕಾರಣ ಕೊಡಿರಿ.

Rajesh has agreed to deliver the goods to Suresh at Kolar on a specified day for a certain price. Time is essence of the contract. Rajesh fails to deliver the goods on the specified day to Suresh. Suresh rescinds the contract and files a suit to recover damages. Decide.

ರಾಜೇಶ ಎಂಬಾತನು, ಸುರೇಶನಿಗೆ ಒಂದು ನಿಗದಿತ ದಿನದಂದು, ನಿಗದಿತ ಬೆಲೆಗೆ ಕೋಲಾರದಲ್ಲಿ ಸರಕುಗಳನ್ನು ಪೂರೈಸಲು ಒಪ್ಪಿದ್ದಾನೆ. ವೇಳೆಯು ಒಡಂಬಡಿಕೆಯ ಅತ್ಯವಶ್ಯಕ ಘಟಕವಾಗಿದೆ. ರಾಜೇಶನು ನಿಗದಿತ ದಿನದಂದು ಸರಕುಗಳನ್ನು ಪೂರೈಸುವಲ್ಲಿ ವಿಫಲನಾದನು. ಸುರೇಶನು ಒಡಂಬಡಿಕೆಯನ್ನು ರದ್ದು ಮಾಡಿ ಪರಿಹಾರ ಧನ ಕೇಳಿ ಮೊಕದ್ದಮೆ ಹಾಕುತ್ತಾನೆ. ನಿರ್ಣಯಿಸಿರಿ.

OR/**ಅಥವಾ**

'A' the owner of motor car agreed to cell his motor car to 'B' for Rs. 1.5 lakhs. The car was destroyed by fire before 'A' could sell the car to 'B'. Hence 'A' could not sell the car to 'B'. 'B' files a suit against A to recover damages for breach of contract. Decide.

ಒಂದು ಕಾರಿನ ಯಜಮಾನನಾದ 'ಅ'ನು ತನ್ನ ಕಾರನ್ನು ರೂ. 1.5 ಲಕ್ಷಕ್ಕೆ 'ಬ'ನಿಗೆ ಮಾರಲು ಒಪ್ಪಿದನು. ಆ ಕಾರು 'ಅ'ನು 'ಬ'ನಿಗೆ ಮಾರುವ ಮೊದಲೇ ಸುಟ್ಟು ಹೋಯಿತು. ಆದ್ದರಿಂದ 'ಅ'ನು 'ಬ'ನಿಗೆ ಕಾರು ಮಾರಾಟ ಮಾಡಲಾಗಲಿಲ್ಲ. 'ಬ'ನು ಒಡಂಬಡಿಕೆಯ ಉಲ್ಲಂಘನೆಗಾಗಿ 'ಅ'ನ ವಿರುದ್ಧ ಪರಿಹಾರ ಕೋರಿ ಮೊಕದ್ದಮೆ ಹೂಡಿದನು. ನಿರ್ಣಯಿಸಿರಿ.

## UNIT – IV

Q. No. 4. (a) What is quasi contract ? Explain the different types of quasi contracts. Marks : 15

ಒಡಂಬಡಿಕೆಗಳನ್ನು ಹೋಲುವ ಸಂಬಂಧ (ಅರೆ ಒಡಂಬಡಿಕೆ)ಗಳೆಂದರೇನು ? ವಿವಿಧ ರೀತಿಯ ಅರೆ ಒಡಂಬಡಿಕೆಗಳನ್ನು ವಿವರಿಸಿರಿ.

OR/**ಅಥವಾ**

Explain 'general' and 'special' damages.

ಸಾಮಾನ್ಯ ಮತ್ತು ವಿಶೇಷ ಪರಿಹಾರ ಧನಗಳನ್ನು ವಿವರಿಸಿ.

(b) Solve the following problem. Give reasons to your answer. Marks : 5

ಈ ಕೆಳಗಿನ ಸಮಸ್ಯೆಯನ್ನು ಬಿಡಿಸಿರಿ. ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿರಿ.

A businessman has paid the sales tax to the government by mistake of law. Can he recover the same ?

ಓರ್ವ ವ್ಯಾಪಾರಿಯು ಕಾನೂನಿನ ತಪ್ಪು ಗ್ರಹಿಕೆಯಿಂದ ಮಾರಾಟ ತೆರಿಗೆಯನ್ನು ತುಂಬಿದನು. ಅವನು ಅದನ್ನು ಮರಳಿ ಪಡೆಯಬಹುದೇ ?

OR/**ಅಥವಾ**

'A' a fruit seller forgets a bag containing the fruits in the house of 'B'. 'B' eats those fruits. 'A' files a suit to recover the value of those fruits. Decide.

'ಅ' ಎಂಬ ಓರ್ವ ಹಣ್ಣಿನ ವ್ಯಾಪಾರಿಯು ಒಂದು ಹಣ್ಣಿನ ಚೀಲವನ್ನು 'ಬ'ನ ಮನೆಯಲ್ಲಿ ಮರೆತಿದ್ದಾನೆ. 'ಬ'ನು ಆ ಹಣ್ಣುಗಳನ್ನು ತಿನ್ನುತ್ತಾನೆ. ಆ ಹಣ್ಣುಗಳ ಬೆಲೆ ಪಡೆಯಲು 'ಅ'ನು 'ಬ'ನ ವಿರುದ್ಧ ಮೊಕದ್ದಮೆ ಹೂಡುತ್ತಾನೆ. ನಿರ್ಣಯಿಸಿರಿ.

## UNIT – V

Q. No. 5. (a) Explain in brief the various types of specific relief that may be granted by the court under the Specific Relief Act. Marks : 15

ನಿರ್ದಿಷ್ಟ ಪರಿಹಾರ ಅಧಿನಿಯಮದಡಿಯಲ್ಲಿ ನ್ಯಾಯಾಲಯವು ದಯಪಾಲಿಸಬಹುದಾದ ವಿವಿಧ ರೀತಿಯ ನಿರ್ದಿಷ್ಟ ಪರಿಹಾರಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

OR/**ಅಥವಾ**

Explain the circumstances under which court may refuse to grant perpetual injunction.

ನ್ಯಾಯಾಲಯವು ನಿರಂತರ ತಡೆಯಾಜ್ಞೆಯನ್ನು ದಯಪಾಲಿಸದೇ ಇರಬಹುದಾದ ಸಂದರ್ಭಗಳನ್ನು ವಿವರಿಸಿರಿ.

(b) Write short note : Marks : 5

ಲಘು ಟಿಪ್ಪಣಿ ಬರೆಯಿರಿ :

i) Recovery of possession of immovable property.

ಸ್ಥಿರ ಆಸ್ತಿಯ ಸ್ವಾಧೀನತೆಯನ್ನು ಮರಳಿ ಪಡೆಯುವಿಕೆ.

OR/**ಅಥವಾ**

ii) Declaratory decrees.

ಘೋಷಣಾತ್ಮಕ ತೀರ್ಪುಗಳು.